MVC No. 1208/2025

PW-2

**(ಇಂದು ದಿಃ 11-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 2ನೇ ಎದುರುದಾರರ ಪರ ಶ್ರೀ. HSP ವಕೀಲರಿಂದಃ-**

ನಾನು ಸರ್ವೊರ್ಧಯ ಆಸ್ಪತ್ರೆ ಸೇಡಂನಲ್ಲಿ ವೈದ್ಯರಾಗಿ ಕೆಲಸ ಮಾಡುತ್ತೇನೆ. ಅಪಘಾತ ಆದ ತಕ್ಷಣ ಅರ್ಜಿದಾರ ಹೈದ್ರಾಬಾದ್ ನಲಿಃ ಚಿಕಿತ್ಸೆ ಪಡೆದುಕೊಂಡು ಮಾರನೇ ದಿನ ನನ್ನ ಬಳಿ ಬಂದಿದ್ದರು ಅಂದಿನಿಂದ ನಾನೇ ಚಿಕಿತ್ಸೆ ನೀಡಿದ್ದೇನೆ. ಅರ್ಜಿದಾರನ ಬಲ ಬುಜಕ್ಕೆ Crush Injury ಇತ್ತು ರಿಪ್ಸ ನಲ್ಲಿ ಹಲವು ಮೂಳೆ ಮುರಿತಾ ಉಂಟಾಗಿತ್ತು. ಭಾರತ ಸರಕಾರದ ಅಧಿಸೂಚನೆಯನ್ನು ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ. ಅರ್ಜಿದಾರನಿಗೆ ಅಪಘಾತದಿಂದ ಬಲ ಗೈನ ಅಂಗ ನ್ಯೂನ್ಯತೆ ಉಂಟಾಗಿದೆ , ಅಷ್ಟೆ ಅಲ್ಲದೇ ಮುಂಚಿನಿಂದ ಅರ್ಜಿದಾರನ ಕಾಲಿಗೆ ಪೊಲೀಯೋ ಸಂಬಂಧ ಅಂಗ ನ್ಯೂನ್ಯತೆ ಇದೆ. ನಾನು shoulder ಮತ್ತು Arm ಗೆ ಸಂಬಂದಪಟ್ಟಂತೆ ಮಾತ್ರ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದೇನೆ. ನಾನು ಅರ್ಜಿದಾರನ ಅಪರ್ ಲಿಂಬಗೆ 45% ಅಂಗ ನ್ಯೂನ್ಯತೆ ತೋರಿಸಿದ್ದೇನೆ. ಅರ್ಜಿದಾರನಿಗೆ ಸಾಮಾನ್ಯ ಗಾಯಗಳು ಆಗಿದ್ದವು ಮತ್ತು ಆತನಿಗೆ ಯಾವುದೇ ಅಂಗ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಅಪರ್ ಲಿಂಬ ಗೆ 45% ಎಂದು ಹೆಚ್ಚಿ ನ ಪ್ರಮಾಣದ ಅಂಗ ನ್ಯೂನ್ಯತೆ ತೋರಿಸಿ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಅರ್ಜಿದಾರ ಮೊದಲಿನಂತೆ ಕೆಲಸ ಮಾಡಬಹುದು ಎಂದರೆ ಸರಿಯಲ್ಲ.

**(ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**